## ಕಳೆದ ಸಂಚಿಕೆಯಲ್ಲಿ



ಶಿವರಾಮ ಮತ್ತು ವೆಂಕಟರಾಮುವಿನ ಸಂಸಾರಗಳು ಪ್ರತ್ಯೇಕವಾದ ನಂತರ ಎರಡೂ ಕುಟುಂಬಗಳು ಹೊಸ ಚಿಗುರು ಕಂಡವು. ಮಕ್ಕಳ ಬೆಳವಣಿಗೆಯಲ್ಲಿ ಹಿರಿಯರ ಸೆಡವು ಕೊಂಚ ಮೆತ್ತಗಾಯಿತು. ವೆಂಕಟರಾಮುವಿನ ಮಕ್ಕಳು ಓದಿನಲ್ಲಿ ಅಷ್ಟೇನು ಚುರುಕಿಲ್ಲದಿದ್ದರೆ, ಶಿವರಾಮನ ಮಕ್ಕಳು ಜಾಣರು. ಎರಡನೆಯ ಮಗ ಪ್ರದೀಪ ಬಿ.ಎ. ಮಾಡಿ, ಎಂ.ಎ. ಮಾಡಿ ದಿನಾ ಓಡಾಡುವಷ್ಟು ಹತ್ತಿರದ ಕಾಲೇಜಿನಲ್ಲಿ ಮೇಷ್ಟ್ರಾಗಿ ಸೇರಿಕೊಳ್ಳುತ್ತೇನೆ ಎನ್ನುವ ಕನಸು ಕಟ್ಟಿಕೊಂಡಿದ್ದ. ಆದರೆ, ವಿಧಿ ಬೇರೆಯದೇ ಇತ್ತು. ತೋಟಕ್ಕೆಂದು ಹೋದ ಹುಡುಗ ಬಂದಿದ್ದು ಹೆಣವಾಗಿ. ಮಗನ ಸಾವು ಶಿವರಾಮ–ಸೀತಾಲಕ್ಷ್ಮಿ ದಂಪತಿಯನ್ನು ಕಂಗೆಡಿಸಿತು. ಉಳಿದವನು ಪ್ರಸನ್ನ, ಊರಿನಲ್ಲಿನ ಜಮೀನು ಮಾರಿ ತನ್ನೊಂದಿಗೆ ನಗರಕ್ಕೆ ಬಂದುಬಿಡಿ ಎಂದು ಒತ್ತಾಯಿಸತೊಡಗಿದ. ತವರಿನ ಮಣ್ಣಿನ ನಂಟು ತೀರುತ್ತಾ ಬಂದಿತ್ತು. ಕೊನೆಗೆ, ಯಾರಿಗೋ ಭೂಮಿ ಮಾರಿ ಬೆಂಗಳೂರಿಗೆ ಬಂದದ್ದಾಯಿತು. ಮಹಾನಗರದಲ್ಲಿ ಬದುಕು ಹೊಸದಾಗಿ ಶುರುವಾಯಿತು. ಮಗನ ಕಣ್ಣಳತೆಯಲ್ಲಿ ಶಿವರಾಮನ ಸಿಟ್ಟು–ಸೇಡಿನ ಮನೋಭಾವ ಕಳೆದುಹೋಯಿತು.

ಅವಳಿಗೆ ಗುಮಾನಿ. ಕಾಲ ಎಂಥವರನ್ನೂ ಹೇಗೆ ಬದಲಾಯಿಸಿಬಿಡುತ್ತದೆ ಎಂದು ಅಚ್ಚರಿಪಡುತ್ತಾಳೆ ಸೀತಾಲಕ್ಷ್ಮಿ. ಕಾಲವೋ? ವಯಸ್ಸೋ? ಕಾಲದೊಂದಿಗೆ ಸೇರಿಕೊಂಡ ವಯಸ್ಸು ಅಂದರೆ ಹೆಚ್ಚು ಸರಿ. ವಯಸ್ಸಾಗುತ್ತಾ ಬಂದಂತೆ ಮೊದಲು ಕಾಡುವುದು ಅಸಹಾಯಕತೆ. ತಮಗೆ ಇನ್ನೊಬ್ಬರ ನೆರವಿನ ಅಗತ್ಯವಿದೆ ಎನಿಸುವ ಅವಲಂಬನೆ. ಈ ಕಾರಣದಿಂದ ಗಂಡ ತಗ್ಗಿ ನಡೆಯುತ್ತಿದ್ದಾರಾ ಅಥವಾ ಒಳಗೊಳಗೆ ಕೂಡಿಟ್ಟುಕೊಂಡಿದ್ದು ಯಾವತ್ತೋ ಒಂದು ದಿನ ಸ್ಫೋಟವಾಗುವುದೋ? ಏನೋ ಹೆದರಿಕೆ. ಯಾಕೋ ಅಂಜಿಕೆ.

ಪ್ರಸನ್ನ ಮತ್ತು ಸವಿತಾ ರಜಾದಿನಗಳಲ್ಲಿ ಹೊರಗೆ ಸುತ್ತಾಡಲು ಹೋಗುವುದು ವಿಶೇಷದ ಸಂಗತಿಯಲ್ಲ. ಅದನ್ನೂ ಜೀರ್ಣಿಸಿಕೊಂಡಿದ್ದರು ದಂಪತಿ. ಆದರೆ ಹಾಗೆ ಜೀರ್ಣಿಸಿಕೊಳ್ಳುವ ಮೊದಲು ಅವರು ಅನುಭವಿಸಿದ ಅವಗಣನೆಯ ಭಾವ ಅವರಿಗೇ ಗೊತ್ತು. ತಮ್ಮನ್ನು ಮನೆಕಾವಲಿಗೆ ಬಿಟ್ಟು ಅವರಿಬ್ಬರೇ ಸರ್ಕೀಟು ಹೋಗುವುದು ಮೊದಲಿಗೆ ಮನಸ್ಸನ್ನು ನೋಯಿಸುತ್ತಿದ್ದಂತೆ ಈಗ ಅವರನ್ನು ನೋಯಿಸುವುದಿಲ್ಲ.

‘ಎಲ್ಲಿಗೆ ಹೋಗಿದ್ದೋ ಸವಾರಿ?’ ಶಿವರಾಮ ಕೇಳುತ್ತಿದ್ದ.

‘ನಂಗೇನು ಗೊತ್ತು? ನಿಮಗೆ ಮಗ ಹೇಳ್ಲಿಲ್ವಾ?’

‘ನಿಂಗೆ ಹೇಳಿರ್ತಾನೆ ಅಂದ್ಕಂಡಿದ್ದೆ...’

ಒಂದೇ ಮನೆಯಲ್ಲಿ ಒಟ್ಟಿಗಿದ್ದುಕೊಂಡು ತಮ್ಮನ್ನು ಎಲ್ಲಿಗೂ ಕರೆದುಕೊಂಡು ಹೋಗುವುದಿಲ್ಲ ಎನ್ನುವುದರ ಜೊತೆ ಎಲ್ಲಿಗೆ ಹೋಗುತ್ತೇವೆಂದು ಹೇಳಿ ಕೂಡ ಹೋಗುವುದಿಲ್ಲ ಎಂದು ಶಿವರಾಮನಿಗೆ ಅಸಹನೆಯಾದರೆ ಊಟಕ್ಕೆ ಮನೆಗೆ ಬರುತ್ತಾರೋ, ಇಲ್ಲವೋ, ಜಾಸ್ತಿ ಅಡುಗೆ ಮಾಡಬೇಕೋ, ಬೇಡವೋ ಇದು ಸೀತಾಲಕ್ಷ್ಮಿಯ ಚಿಂತೆ.

‘ಬೇಕಿದ್ರೆ ಬಂದು ಮಾಡ್ಕಂತಾರೆ. ನಮ್ಮಿಬ್ರಿಗೆ ಆಗುವಷ್ಟು ಮಾಡು...’ ಅನ್ನುತ್ತಿದ್ದ ಶಿವರಾಮ. ಒಂದೇ ಮನೆಯಲ್ಲಿದ್ದುಕೊಂಡು, ಒಂದೇ ಮನೆಯಲ್ಲಿದ್ದುಕೊಂಡು, ಪದೇ ಪದೇ ಈ ಮಾತನ್ನು ಉರು ಹಾಕುವಂತಾಗುತ್ತಿತ್ತು. ದಿನನಿತ್ಯ ಎಂಬಂತೆ ಸೂಕ್ಷ್ಮ ಮನಸ್ಸನ್ನು ಗೀರುವ ಏನಾದರೊಂದು ನಡೆಯುತ್ತಿರುತ್ತಿತ್ತು. ಒಮ್ಮೆ ಮನಸ್ಸು ತಡೆಯದೆ ಮಗನೊಡನೆ ಕೇಳಿದ್ದಳು ಸೀತಾಲಕ್ಷ್ಮಿ,

‘ಎಲ್ಲಿಗೆ ಹೋಗೋದೂಂತ ಹೇಳಾದ್ರೂ ಹೋಗ್ಬಾರ್ದನೋ? ಕಾಯೋದು ತಪ್ಪುತ್ತೆ...’

‘ನೀವೆಂತಕ್ಕೆ ಕಾಯ್ತೀರಿ ಅಮ್ಮಾ? ಎಲ್ಲಿಗೆ ಹೋಗ್ಬೇಕೂಂತ ಮೊದಲೇ ಯೋಚಿಸಿರ್ತೀವಿ ಅಂದ್ಕಂಡಿದೀಯಾ? ಎಷ್ಟೋ ಸಲ ಸುಮ್ನೆ ಸುತ್ತಾಡ್ಕಂಡು ಬರ್ತೀವಿ. ಮಾಲ್‌ಗೆ ಹೋದ್ರೆ ಗಂಟೆಗಟ್ಲೆ ಅಲ್ಲೇ ಕಳೆದು ಹೋಗುತ್ತೆ...’

ಎಲ್ಲರ ಮನೆಯ ದೋಸೆಯ ಮತ್ತದೇ ತಿಪ್ಪೆ ಸಾರಿಸುವ ಮಾತಾಡಬಹುದಾದರೂ ಶಿವರಾಮನಿಗೆ ಅನಿಸುತ್ತಿತ್ತು ಹೀಗೆ ನಡೆದುಕೊಳ್ಳಬೇಕಾದ ಅವಶ್ಯಕತೆಯೇನಿಲ್ಲ. ತಾವು ಏನು ನಿರೀಕ್ಷೆ ಮಾಡುತ್ತೇವೆ? ಪ್ರೀತಿಯ ಎರಡು ಮಾತು. ಹೊರಗಿನವರ ದೃಷ್ಟಿಗೆ ಕ್ಷುಲ್ಲಕವೆಂದು ಕಾಣಿಸಬಹುದಾದ ಮಾತು. ‘ಹೋಗ್ಬರ್ತೀನಿ ಅಪ್ಪಾ...’ ಎಂದು ಮಗ ಆಫೀಸಿಗೆ ಹೋಗುವಾಗ ಹೇಳುವ ಒಂದು ಮಾತು ಇಡೀ ದಿನದ ಲವಲವಿಕೆಗೆ, ಜೀವಚೈತನ್ಯಕ್ಕೆ ಕಾರಣವಾಗುವುದನ್ನು ಕಂಡುಕೊಂಡ ಶಿವರಾಮನಿಗೆ ತನ್ನ ಮೇಲೆ ತನಗೇ ಅಪನಂಬುಗೆ.

ನಾನು ಹೀಗಾಗಿ ಬಿಟ್ಟೆನಾ?

***

ಶಿವರಾಮ ಅಜ್ಜ ಆದ. ಸೀತಾಲಕ್ಷ್ಮಿ ದೊಡ್ಡಮ್ಮ. ಅಜ್ಜಿ ಅಂದರೆ ಅವಳಿಗೆ ಉಗುಳು ನುಂಗುವಂತಾಗುತ್ತಿತ್ತು. ತಮ್ಮೂರ ಕಡೆ ತಂದೆಯ ತಾಯಿಯಾಗಲೀ, ತಾಯಿಯ ತಾಯಿಯಾಗಲೀ ಅಜ್ಜಿ ಅಲ್ಲ, ದೊಡ್ಡಮ್ಮ. ಅಜ್ಜಿ ಎನ್ನುವ ಪದಬಳಕೆ ತೀರಾ ಅಪರೂಪ. ಗಂಡನಿಲ್ಲದ ವಯಸ್ಸಾದ ಹೆಂಗಸನ್ನು ‘ಅಜ್ಜೀ...’ ಎಂದು ಸಂಬೋಧಿಸುವುದು ತಾತ್ಸಾರ ಭಾವನೆಯ ದ್ಯೋತಕ ಎನ್ನುವ ನಂಬುಗೆ.

ಮನೆಯ ಮೊದಲ ಮೊಮ್ಮಗನನ್ನು, ವಂಶೋದ್ಧಾರಕನನ್ನು ಶಿವರಾಮ, ಸೀತಾಲಕ್ಷ್ಮಿ ಜೀವಕ್ಕಿಂತ ಹೆಚ್ಚು ಪ್ರೀತಿಸುತ್ತಿದ್ದುದು ಸವಿತಳಿಗೆ ಹೆಮ್ಮೆಯ ಸಂಗತಿಯಾಗಿ ಕಾಣಿಸದೆ, ‘ತನ್ನ ಮಗ ತನ್ನ ಹಕ್ಕು ಎನ್ನುವಂತೆ ಅವಳು ನಡೆದುಕೊಳ್ಳುತ್ತಿದ್ದಾಳೆ ಎಂದು ಸೀತಾಲಕ್ಷ್ಮಿಗೆ ಅನಿಸುತ್ತಿತ್ತು. ಬಾಣಂತನ ಮುಗಿಸಿಕೊಂಡು ಮೂರನೇ ತಿಂಗಳಲ್ಲಿ ಮನೆಗೆ ಬಂದ ಸೊಸೆ ತನ್ನ ಜೊತೆ ಅಮ್ಮನನ್ನೂ ಕರೆದುಕೊಂಡು ಬಂದಿದ್ದಳು. ಮೊಮ್ಮಗ ಮನೆಗೆ ಬಂದ ಮೇಲೆ ಮನಸೋಇಚ್ಛೆ ಹೇಗೆ ಅವನೊಡನೆ ಕಾಲ ಕಳೆಯಬಹುದು ಎಂದು ಕನಸು ಕಟ್ಟಿಕೊಂಡಿದ್ದ ದಂಪತಿಗೆ ಭ್ರಮನಿರಸನ. ಮಗುವಿನ ಆರೈಕೆಯ ಹೊಣೆಯನ್ನು ಬೀಗಿತ್ತಿ ವಹಿಸಿಕೊಂಡಿದ್ದರು. ನೀಡಿದ ಕಾಲುಗಳ ಮೇಲೆ ಮಗುವನ್ನು ಮಲಗಿಸಿಕೊಂಡು ಎಣ್ಣೆ ಹಚ್ಚಿ, ತಿಕ್ಕಿ ತೀಡಿ, ಹದಬಿಸಿಯ ನೀರೆರೆದು ಮೈ ತೊಳೆದು... ಎಂಥ ಪೆದ್ದಿ ಸೀತಾಲಕ್ಷ್ಮಿ. ‘ಎಳೆ ಮಗೂಗೆ ಸ್ನಾನ ಮಾಡಿಸೋಕೆ ನಂಗೆ ಬರುತ್ತೇನ್ರೀ? ಮರೆತೇ ಹೋಗಿದೆ. ಪ್ರದೀಪ ಸಣ್ಣೋನಿದ್ದಾಗ’ ಎಂದು ಗಂಡನೊಡನೆ ಹೇಳಿಕೊಳ್ಳುವಲ್ಲಿ ಕಿರಿಮಗನ ನೆನಪಿನಿಂದ ಅವಳ ದನಿ ಉಡುಗಿ ಹೋಗಿತ್ತು.

‘ಅದೇನು ಬ್ರಹ್ಮವಿದ್ಯೇನಾ? ಮರೆತು ಹೋಗಿದ್ದರೆ ತನ್ನಿಂತಾನೇ ನೆನಪಾಗುತ್ತೆ...’ ಎಂದಿದ್ದ ಶಿವರಾಮ ಧೋರಣೆಯಿಂದ.

ನೆನಪು ಮಾಡಿಕೊಳ್ಳಬೇಕಾದ ಅವಶ್ಯಕತೆಯೇ ಬರಲಿಲ್ಲ. ಮೊಮ್ಮಗನ ಆರೈಕೆಯ ಹೊಣೆ ಬೀಗಿತ್ತಿ ವಹಿಸಿಕೊಂಡಿದ್ದರು. ಎಳೆಮಗುವಿಗೆ ಸ್ನಾನ ಮಾಡಿಸುವಾಗ ಆ ಚಂದವನ್ನು ನಿಂತು ನೋಡಬೇಕೆಂದು ಸೀತಾಲಕ್ಷ್ಮಿಗೆ ಆಸೆ. ಆದರೆ ಮುಚ್ಚಿಕೊಳ್ಳುತ್ತಿತ್ತು ಬಚ್ಚಲ ಬಾಗಿಲು. ಮುದ್ದಿನ ಮುದ್ದೆಯಂತಿದ್ದ ಮಗುವಿಗೆ ನೀರೆರೆದು, ತುಪ್ಪಳದಂಥ ಟವೆಲ್ಲಿನಿಂದ ವರೆಸಿ, ಈಚೆಗೆ ಕರೆದುಕೊಂಡು ಬರುತ್ತಿದ್ದಂತೆ ಮುಚ್ಚಿಕೊಳ್ಳುತ್ತಿತ್ತು ರೂಮಿನ ಬಾಗಿಲು. ನೀವು ಪರಕೀಯರು. ನಮ್ಮ ಆತ್ಮೀಯತೆಯ ವಲಯದೊಳಗೆ ನಿಮಗೆ ಪ್ರವೇಶವಿಲ್ಲ ಎನ್ನುವಂತೆ ಮುಚ್ಚಿಕೊಳ್ಳುವ ಬಾಗಿಲುಗಳು ಮನಸ್ಸು–ಮನಸ್ಸುಗಳ ನಡುವೆ, ಬಾಂಧವ್ಯದ ನಡುವೆ, ಸಹಜವಾಗಿ ಇರಬೇಕಾದ ಪ್ರೀತಿಯ ಹರಿವಿಗೆ ತಡೆಯೊಡ್ಡಿ, ಮುಚ್ಚಿಕೊಳ್ಳುತ್ತಿದ್ದ ಬಾಗಿಲುಗಳು ಭವಿಷ್ಯದ ಸಂಕೇತವಾಗಿದ್ದುವೇ? ಹೀಗೇನೋ ಅನಿಸುತ್ತಾ ಸೀತಾಲಕ್ಷ್ಮಿಯ ಹೃದಯ ಭಾರವಾಗುತ್ತಿತ್ತು.

***

ಮೊಮ್ಮಗ ಅನಿರುದ್ಧನ ಮೊದಲ ವರ್ಷದ ಹುಟ್ಟುಹಬ್ಬವನ್ನು ಅದ್ಧೂರಿಯಿಂದ ಆಚರಿಸಬೇಕೆಂದು ಮನೆಯಲ್ಲಿ ತೀರ್ಮಾನವಾಗಿತ್ತು. ಅಂದರೆ ಎಲ್ಲರೂ ಕೂತು ತೀರ್ಮಾನಿಸಿದ್ದರು ಎನ್ನುವ ಅರ್ಥವಲ್ಲ. ಮಗುವಿನ ತಂದೆ, ತಾಯಿ ನಿರ್ಧರಿಸಿದ್ದರು. ಪಂಚತಾರಾ ಹೋಟೆಲಿನಲ್ಲಿ ವೈಭವದ ಪಾರ್ಟಿ ಇಟ್ಟುಕೊಳ್ಳಬೇಕೆಂಬ ಅವರ ತೀರ್ಮಾನಕ್ಕೆ ವ್ಯತಿರಿಕ್ತವಾಗಿ ಶಿವರಾಮನ ಮನದಿಚ್ಛೆ ಬೇರೆಯಾಗಿತ್ತು. ಗೃಹಪ್ರವೇಶದ